Rega No M 1229 | 43rd Year | Sri 'Satyavadi' Mysore | 10—3—1

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಿರಸ್ತೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿ ೩ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಪಾನಪತಿಬಂಧದ ಪುನರ್ವಿಮರೆಯಾಗಲು ವಿಧಾನ ಸಬೆಯಲಿ ಸೂಚನೆ

ಮುಂದುವರಿದಿದೆ

ಬೆಂಗಳೂರು 9 — ಕಾವುಗಾರಿ ಇಲಾಖೆಗೆ ಕಂಟ್ರಾಕ್ಟರು ರಜಿಸ್ಟರು ಮಾಡಿಕೊಳ್ಳಲು ಅರ್ಜಿ ಸಲ್ಲಿಸುವ ತಾ|| ನ್ನು ಮಾರ್ಚ್ 31 ರ ವರಿಗೆ ಮುಂದುವರಿಸಿದೆ

ಭೂಕಂಪ

ಕಳೆದ ಶನಿವಾರ ಬೆಳಗ್ಗೆ 3 ಗಂಟೆಯಲ್ಲಿ ತೀವ್ರತೆಯುಳ್ಳ ಭೂಕಂಪವಾಯಿತು ಆಸ್ತಿಪಾಸ್ತಿ ನಷ್ಟ ಮತ್ತು ಸಾವು ಸಂಭವಿಸಿಲ್ಲ.

ಒಂದೇ ರೀತಿ ದರ

ಹುಬ್ಬಳ್ಳಿ 8 — ಮುಂದಿನ ಏಪ್ರಿಲಿನಲ್ಲಿ ಪ್ರಾಂತ್ಯಾದ್ಯಂತ ವಿದ್ಯುತ್ ದರವನ್ನು ಒಂದೇ ಸಮ ಮಾಡುವದಾಗಿ ಮೈಸೂರು ಪ್ರಾಂತದ ವಿದ್ಯುತ್ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ ಗುರುದತ್ ತಿಳಿಸಿದರು

ನೆಹರುರಿಗೆ ವಿವರಣೆ

ನವ ದೆಹಲಿ 8 — ಕಾಶ್ಮೀರ ರಾಷ್ಟ್ರೀಯ ಪ್ರಜಾಸ್ವಾತ್ಯಂಗದ ಅಧ್ಯಕ್ಷ ಶೇಖ ಷಾದಿಕ್ ಅಲಿಯವರು ಈ ದಿನ ಪ್ರಾ|| ನೆಹರು ಸಂಗಡ ಮಾತುಕತೆ ನಡೆಸಿ ಕಾಶ್ಮೀರ ಪರಿಸ್ಥಿತಿ ವಿವರಿಸಿದರು

ಹಸು ಖಾಕೆ

ಕೊಲ್ಹಾರ 6 — ಕರೆಯುವ ಹಸು ಆಕಳಾಗಿ ಮನೆಯಲ್ಲಿ ಇಟ್ಟುಕೊಳ್ಳಲು ನಿಮ್ಮ ಪತ್ನಿಗೆ ಹೇಳಿ [illegible] ಎಂದು ಉಪಮುಖ್ಯಮಂತ್ರಿ ಶ್ರೀ ಕೃಷ್ಣಪ್ಪನವರು [illegible] ಶ್ರೀಮತಿ ಶಾಂತಾ ತಿಳಿಸಿದರು.

ನೆಹರು ಮನವಿ

ಭಿಲ್ವಾರ 9 — ಭಾರತೀಯ ವೈಮಾನಿಕ ಸಾಯುಗಾರರು ಸಹಕಾರ ಸೇವೆ ನಿರ್ಮಿಸಿಕೊಳ್ಳಬೇಕೆಂದು ಪಂ|| ನೆಹರು ಸಾರ್ವಜನಿಕ ಸಭೆಯಲ್ಲಿ ತಿಳಿಸಿದರು

ಹರತಾಳ

ಒಂದು ವಾರ ಹತ್ತಿ ವ್ಯಾಪಾರ ನಿಲ್ಲಿಸಬೇಕೆಂದು ಈ ತಿಂಗಳು 4 ನೇ ತಾ|| ಹತ್ತಿ ವರ್ತಕರು ಮಾಡಿದ ತೀರ್ಮಾನದಂತೆ 6 ನೇ ತಾ|| ನಿಂದ ರಾಯಚೂರು ಹತ್ತಿ ಮಾರ್ಕೆಟ್ ಹರತಾಳ ಆಚರಿಸಿದೆ

ಸಾದಿಕರ ಆಶಯ

ಮದ್ರಾಸು ದಿ — ಅಖಿಲ ಭಾರತ ಕಾಂಗ್ರೆಸಿನ ಸ್ವಾಧಾನ ಕಾರ್ಯದರ್ಶಿ ಸಾದಿಕ್ ಅಲಿ ಹೇಳಿಕೆಯಿತ್ತು, ಡಿಸೆಂಬರು ಕಡೆಯೊಳಗೆ ಪ್ರಾಂತಗಳಲ್ಲಿ ಭೂ ಶಾಸನ ಮುಗಿಯುವದಾಗಿ ತಿಳಿಸಿದರು

ಭಾರತದ ಬಗ್ಗೆ ಮೆಚ್ಚಿಕೆ

ನವ ದೆಹಲಿ 9 — ಅರಬ್ ರಾಜ್ಯಗಳು ಭಾರತದ ಬಗ್ಗೆ ಮೆಚ್ಚಿಕೆ ಹೊಂದಿರುವದಾಗಿ ಇರಾಕಿನ ಭಾರತ ರಾಯಭಾರಿ ಹುಸೇನ್ ಜವಿಾಲ್ ತಿಳಿಸಿದ್ದಾರೆ

ಮುಷ್ಕರ ಈಗಿಲ್ಲ

ಕೊಯಮ್ಮತ್ತೂರು 9 — ಪ್ರಾಂತದ ಕಾರ್ಮಿಕ ಅಧಿಕಾರಿಗಳ ಸೂಚನೆಯ ಪ್ರಕಾರ ಟಬ್ಬ್ ಗಿರಣಿ ಕಾರ್ಮಿಕರು ಮುಷ್ಕರ ಮುಂದೆ ಹೋಯಿತು ಈ ತಿಂಗಳು 11 ರಿಂದ ಮುಷ್ಕರ ನಡೆಯುವೇಕಾಗಿತ್ತು.

ಕೇರಳದಲ್ಲಿ ಲಂಚ ನಿರೋಧ ಮಸೂದೆ ಸಿದ್ಧವಾಗಿರಿ ಎಂದು ಕಾಯದೆ ಮಂತ್ರಿ ಶ್ರೀ ಕೃಷ್ಣಯ್ಯಂ ತಿಳಿಸಿದ್ದಾರೆ

ಬೆಂಗಳೂರು 9 — ಮೈಸೂರು ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಶ್ರೀನಿವಾಸ ಶೆಟ್ಟಿಯವರು ಆಂದಾಜಪಟ್ಟಿಯ ಮೇಲೆ ಭಾಷಣ ಆರಂಭಿಸುತ್ತಾ, ಪಾನಸ್ಪತಿಬಂಧದಿಂದ ಆಗುತ್ತಿರುವ ಕೆಲಸದಿಂದ ಅದನ್ನು ಪುನರ್ವಿಮರ್ಶೆ ಮಾಡಬೇಕೆಂದು ತಿಳಿಸಿದರು ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ- ಸರ್ಕಾರಿ ಸ್ಥಾನದಲ್ಲಿ ಕುಳಿತಿರುವವರ ಪೈಕಿ ಎಷ್ಟು ಜನರು ಪಾನ ಪ್ರತಿಬಂಧದಿಂದ ರಾಮರಾಜ್ಯ ದೂರ ಕಿಸುವರೆಂದು ತಿಳಿದಿರುವರೋ ಗೊತ್ತಿಲ್ಲ ಅದು ನೈತಿಕ ಕಾನೂನು ಪ್ರಪಂಚದ ಯಾವ ಭಾಗದಲ್ಲೂ ಅದು ಯಶಸ್ವಿ ಆಗಿಲ್ಲವೆಂದು ಬುದ್ಧಿವಂತರು ಹೇಳಿದ್ದಾರೆ

ಸಭೆಗೆ ಹಾಜರಾಗುವುದಿಲ್ಲ

ತಿರುವೇಂದ್ರ 9 — ಆಂಧ್ರ ಅಕ್ಕಿ ವ್ಯವಹಾರ ವಿಚಾರಣಾ ಸಮಿತಿ ವರದಿ ಬರುವ ವರೆಗೆ ವಿಧಾನ ಸಭೆಗೆ ಹಾಜರಾಗುವದಿಲ್ಲವೆಂದು 45 ಮಂದಿ ಸದಸ್ಯರುಳ್ಳ ಕೇರಳದ ಕಾಂಗ್ರೆಸು ಪಕ್ಷ ನಿರ್ಧರಿಸಿದೆ

ಮೆರವಣಿಗೆ

ನವ ದೆಹಲಿ 8 — ಪಂಜಾಬಿನ ಗುರುದ್ವಾರಗಳಲ್ಲಿ ಹಸ್ತಕ್ಷೇಪ ಮಾಡುವರೆಂಬ ಆರೋಪ ಪ್ರತಿಭಟಿಸಿ ಮಾರ್ಚ್ 15 ನೇ ತಾ|| ಅಕಾಲಿ ನಾಯಕ ಮಾ|| ತಾರಾಸಿಂಗರ ನಾಯಕತ್ವದಲ್ಲಿ ಸಿಕ್ಖರ ಮೆರವಣಿಗೆ ಏರ್ಪಾಟಾಗಿದೆ.

ಬಲವಂತವಿಲ್ಲ

ರಾಜಪಾಳ್ಯಂ 8 — ಕೇಂದ್ರ ಸರಕಾರದ ಒಪತಿ ಸಾಕಲ್ಯ ಮಂತ್ರಿ ಶ್ರೀ ಕೆ ಸಿ. ರೆಡ್ಡಿ ಇಲ್ಲಿ ಹೇಳಿಕೆಯಿತ್ತು, ಸಹಕಾರ ವ್ಯವಸಾಯ ಕಾರ್ಯಕ್ರಮದಲ್ಲಿ ಕಡ್ಡಾಯ ಕ್ರಮವಿಲ್ಲವೆಂದು ತಿಳಿಸಿದರು

7 ಮಂದಿಯ ನಿಧನ

ಭಿಲ್ವಾರ 9 — 25 ಪ್ರಯಾಣಿಕರು ಇದ್ದ ಬಸ್ಸು ಇಲ್ಲಿಗೆ 6 ಮೈಲಿಗಳ ದೂರ ವಿದ್ದ ಹಳ್ಳಕ್ಕೆ ಬಿದ್ದು ಬಿಂಕಿ ಹೊತ್ತಿ ಕೊಂಡ ಕಾರಣ 7 ಪ್ರಯಾಣಿಕರು ಮರಣಹೊಂದಿ 10 ಜನರು ಗಾಯಗೊಂಡರು

ಬಂಧನ

ಮಾರ್ಚ್ 5 ನೇ ತಾ|| ಗೆ ಅದ 1 ತಿಂಗಳಿನಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಗಡಿ ಸತ್ಯಾಗ್ರಹದಲ್ಲಿ 29 ಮಹಿಳೆಯರನ್ನೊಳಗೊಂಡ 118 ಜನರು ಬಂಧನವಾಗಿದೆ

ಕಿಲೋಮೀಟರ್ ಕಲ್ಲು

ನವ ದೆಹಲಿ 9 — ಮೈಲು ಕಲ್ಲುಗಳನ್ನು ಕಿಲೋಮೀಟರುಗಳಿಗೆ ಪರಿವರ್ತಿಸುವ ಕಾರ್ಯವನ್ನು ಸರ್ಕಾರ ಕೈಗೊಳ್ಳಲಿದೆ ಹಿಂದಿ, ಸ್ಥಳೀಯ ಭಾಷೆ ಮತ್ತು ಇಂಗ್ಲೀಷು ಭಾಷೆಯಲ್ಲಿ ಕಲ್ಲುಗಳನ್ನು ಇಡಲಾಗುವದು.

ಸತ್ತಿಲ್ಲ

ಲಂಡನ್ 9 — ಉತ್ತರ ಇರಾಕಿನ ದಂಗೆಕೋರನಾಯಕ ಕ|| ಅಬ್ದುಲ್ ವಹಾಬ್ ಷವಾಫ್ ಜೀವಂತವಾಗಿರುವರು,

— × —

ಬೊಂಬಾಯಿ 9 — ಭಾರಿ ಕೈಗಾರಿಕೆಗಳಿಗೂ ಸಹಕಾರ ಪದ್ಧತಿ ವಿಸ್ತರಣೆ ಆಗಬೇಕೆಂದು ಪಂ|| ನೆಹರು ತಿಳಿಸಿರುವರು,

ನಾಳೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸುಪಕ್ಕ ಕೃಷ್ಣ ಜೋಯಿಸರಿಂದ

11 ದ್ವಿತೀಯ ಉ. ಭಾದ್ರ

ವಿ. ಕೆ. ಕೃಷ್ಣಮೆನನ್‌ರಿಗೆ ಡಾಕ್ಟರೇಟ್ ಪ್ರಶಸ್ತಿ



ಮೈಸೂರು 10 — ಈ ಬೆಳಿಗ್ಗೆ ಮೈಸೂರು ವಿಶ್ವವಿದ್ಯಾನಿಲಯದ ವಿಶೇಷ ಘಟಿಕೋತ್ಸವ ಕ್ರಾಫರ್ಡ್ ಹಾಲ್‌ನಲ್ಲಿ ಏರ್ಪಾಟಾಗಿದ್ದು, ಭಾರತದ ರಕ್ಷಣಾ ಮಂತ್ರಿ ಶ್ರೀ ವಿ. ಕೆ. ಕೃಷ್ಣಮೆನನ್‌ರಿಗೆ ಡಾಕ್ಟರ್ ಲಿಟರ್ರ್ ಗೌರವ ಪ್ರಶಸ್ತಿ ಕೊಡಲಾಯಿತು.

ಪ್ರಪಂಚ ಪತ್ರಿಕಾ ಕಾಂಗ್ರೆಸ್

ಕೊಲಂಬಿಯಾ, ಮಿಸೌರಿ 5— ಇದೇತಾನೆ ಈವಾರ ಮುಕ್ತಾಯವಾದ ಪ್ರಪಂಚ ಪತ್ರಿಕಾ ಕಾಂಗ್ರೆಸ್ಸಿನಲ್ಲಿ ಭಾಗವಹಿಸಿದ 30 ಕ್ಕೂ ಹೆಚ್ಚು ರಾಷ್ಟ್ರಗಳ ಪತ್ರಿಕಾ ಪ್ರತಿನಿಧಿಗಳು ಚಿಕಾಗೋ ಪ್ರದೇಶದಲ್ಲಿ ಎಂಡು ವಾರಗಳ ಕಾಲ ಪ್ರವಾಸ ಮಾಡಲು ಈ ದಿನ ಪ್ರಯಾಣ ಮಾಡಿದರು — ಚಿಕಾಗೋ ಪ್ರಕಾಶಕರು ಶುಕ್ರವಾರ ಈ ಪ್ರವಾಸಿಕರಿಗೆ ಉಪಹಾರ, ಭೋಜನ ಮತ್ತು ಸ್ವಾಗತ ಸಮಾರಂಭಗಳನ್ನು ನಡೆಸಲಿದ್ದಾರೆ — 'ಸ್ವತಂತ್ರ ಜಗತ್ತಿನ ಪತ್ರಿಕೆಗಳಿಗೆ ಮಾರ್ಗದರ್ಶಕವಾಗಬಲ್ಲ ನಿರ್ಣಯ ಶಕ್ತಿಗಳನ್ನು ರಚಿಸಿರುವುದೇ ಪ್ರಪಂಚ ಪತ್ರಿಕಾ ಕಾಂಗ್ರೆಸ್ಸಿನ ಪ್ರಾಮುಖ್ಯ ಸಾಧನೆ ಎಂಬುದಾಗಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಶಾಲೆಯ ಮುಖ್ಯರಾದ ಸಿ. ಕೆ ಭಟ್ಟಾಚಾರ್ಯರು ಅಧಿವೇಶನದ ಕೊನೆಯ ದಿನವಾದ ಬುಧವಾರ ಕಾಂಗ್ರೆಸ್ಸಿನಲ್ಲಿ ನುಡಿದರು — 1926 ರಿಂದೀಚೆಗೆ ಮೊಟ್ಟಮೊದಲಬಾರಿಗೆ ಸೇರುತ್ತಿರುವ ಪತ್ರಿಕೋದ್ಯೋಗಿಗಳ ಪ್ರಪಂಚ ವ್ಯಾಪಕವಾದ ಈ ಸಭೆ 'ಮತ್ತೇನನ್ನು ಸಾಧಿಸದೆ ಇದ್ದರೂ, ನಾವೆಲ್ಲಾ ಸೇರಿದ್ದೇವೆ, ಒಟ್ಟುಗೂಡಿದ್ದೇವೆ, ವಿಚಾರ ವಿನಿಮಯ ಮಾಡಿದ್ದೇವೆ ಮತ್ತು ತತ್ವಗಳನ್ನು ರೂಪಿಸಿದ್ದೇವೆ ಎಂದರು ಭಟ್ಟಾಚಾರ್ಯ— ಪತ್ರಿಕೋದ್ಯೋಗಿಗಳು ಎದುರಿಸಬೇಕಾದ ಸಮಸ್ಯೆಗಳು ಎಂಡು : , ರಾಷ್ಟ್ರ ಮತ್ತು ಸಮಾಜಗಳಿಗೆ ಒಳಿತಾಗುವ ಜವಾಬ್ದಾರಿಯುತವಾದ ಪತ್ರಿಕೆಯನ್ನು ನಡೆಸುವುದು ಒಂದು ; ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದು ಇನ್ನೊಂದು ', ಈ ಸಮ್ಮೇಳನದ ಗುರಿಯಾದ ಪತ್ರಿಕಾಸ್ವಾತಂತ್ರ್ಯವೆಂದರೆ ಓದುಗನ ಸ್ವಾತಂತ್ರ್ಯ ಎಂದರ್ಥ ; ಏಕ ಪ್ರಪಂಚದ ಭಾವನೆಯನ್ನು ಸಾಧಿಸುವುದೇ ಮಾನವರೆಲ್ಲರ ಒಂದು ಗುರಿ ; ಈ ಸಮ್ಮೇಳನ ಕೂಡ ಈ ದಿಕ್ಕಿನಲ್ಲಿ ಇಟ್ಟ ಒಂದು ಹೆಜ್ಜೆ ' ಎಂದರವರು — ಕೊನೆಯ ಅಧಿವೇಶನದ ದಿನವಾದ ಬುಧವಾರ ಮಾಜಿ ಅಧ್ಯಕ್ಷ ಹ್ಯಾರಿ ಟ್ರೂಮನ್ನರು ಅಲ್ಪ [illegible] ಅತಿಥಿಗಳಾಗಿ ಭಾಗವಹಿಸಿದರು ; ಸುದ್ದಿ ಪ್ರಕಟಣೆಯಲ್ಲಿ ಹೆಚ್ಚಿನ ನಿ[illegible] ಅನಾಯಿತಿಯಿಂದನ್ನು ಅದು ಆದ ರೀತಿಯಲ್ಲಿ ಪ್ರಚಾರಮಾಡಿದ್ದೇ ಪತ್ರಿಕೆಗಳ ಕೆಲಸ, ಎಂದರವರು.

ವುಡ್‌ಲ್ಯಾಂಡ್ಸ್ ತೇಜಸ್ವಿ 6 ನೇ ವಾರ

ಸಂಗೀತಪೂರ್ಣ ಹಾಸ್ಯಮಯ ಚಿತ್ರ — ನೀಲಾ ನೃತ್ಯಗಳು ಗೀವಾಳರಿಸಲ್ಲಿ

ದಿಲ್ಲೀ – ಕ – ಥಗ್ (ಹಿಂದಿ)

ತಾರಾಗಣ:- ನೂರ್ಜ, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು

ಅಪೆರಾ— ಜಯಪ್ರದ 2 ನೇ ವಾರ

ಮಾಧವಿ

ನಟವರ್ಗ— ಎಸ್. ಜಾನಕಿ, ದೇವಿಕ, ಮನೋಹರ

ಮನಮೋಹಕ ತಮಿಳು ಚಿತ್ರ — — ಪ್ರತಿದಿನ 3 ಆಟಗಳು

ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಜೊತೆಯಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ
ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆಚ್ಚಕ್ಕಾಗಿ 5 ಆಣೆ
ಪೋಷಕರು ರೂ 25, ಜೊತೆಯಲಿಗರು ರೂ 10 (ಒಂದೇಸಾರಿ) ಮಾತ್ರ

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು
ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು

Advertise in Goraksana and help the pious cause

ವಿಳಾಸ: ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

SHAKTI
SUDHA

A Superb Tonic

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ For Quality Printing

ಅಶೋಕಾ ಪ್ರಾರ್ಥಿಸಿ L. N. Press

ಅಶೋಕ್ಸ್‌ಡಾ ಬಜಾರ್ ಮೈಸೂರು Sivarampet, Mysore

Edited, Printed & Published by Dharma Prachara Nirata M. Krishna Rao, at the Satyavadi Press Chamarajapuram, Mysore.